# ಆಹಾ ಸುದ್ದಿ!

★ ಸಸಿತೋಟ



ಜಾವಾ ದ್ವೀಪದ ಉಪಾಹಾರಗೃಹವೊಂದರ ಥೀಮ್ ಶೌಚಾಲಯವಂತೆ. ಶೌಚಾಲಯದ ಕಮೋಡ್‌ನಲ್ಲಿ ಮಾಂಸದ ಸೂಪ್ ತುಂಬಿಡುತ್ತಾರಂತೆ. ಜೊತೆಗೆ ಗ್ರಾಹಕರು ಕುಳಿತುಕೊಳ್ಳಲೂ ಶೌಚಾಲಯದ ಸೀಟ್. ತಿಂದ ನಂತರ ಬಳಸುವುದನ್ನು ತಿನ್ನಲೂ ಬಳಸುತ್ತಿರುವುದನ್ನು ನೋಡಿದರೆ ಉಳಿತಾಯ ಯೋಜನೆ ಜೋರಾಗೇ ಜಾರಿಯಾಗುತ್ತಿರಬಹುದು.

ಟೋಕಿಯೊ ಬೀದಿಗಳಲ್ಲಿ ಇದ್ದಕ್ಕಿದ್ದಂತೆ ತೊಟ್ಟ ಉಡುಪು ಕಳಚಿ ಹಾಕಿ ಈಜುಡುಗೆಯಲ್ಲಿದ್ದ ದಿಟ್ಟ ಚೆಲುವೆಯರು ನರ್ತಿಸತೊಡಗಿದರಂತೆ. ಜನ ಅಚ್ಚರಿಪಡಬೇಕೋ, ಖುಷಿಪಡಬೇಕೋ ಎಂದು ತಿಳಿಯದೇ ಸ್ಮಾರ್ಟ್‌ಫೋನ್ ಹೊಂದಿಸಲು ಶುರು ಮಾಡಿದರಂತೆ. ಇದು ಜಪಾನಿನ ಈಜುಡುಗೆ ಸಂಸ್ಥೆಯೊಂದರ ಗಿಮಿಕ್ ಆಗಿದ್ದು, ಮುಂದಿನ ದಿನಗಳಲ್ಲಿ ಇಂತಹ ತುರ್ತು ಕಾರ್ಯಕ್ರಮಗಳಿಗೆ ಜನ ಸದಾ ಸನದ್ಧರಾಗಿರಲು ಇದು ಪ್ರೇರೇಪಣೆ ನೀಡಿದೆಯಂತೆ.




ಜಪಾನಿನಲ್ಲಿ ಕಿವಿಗಳು ಬಾಡಿಗೆಗೆ ಇವೆಯಂತೆ. ಅಲ್ಲಿ ಒಂಟಿತನದಿಂದ ಬಳಲುವವರು ಬಹಳ ಮಂದಿ. ಸಾಮಾಜಿಕ ಕಟ್ಟುಪಾಡುಗಳಿಂದಾಗಿ ಮನೆಯವರ ಜೊತೆಗೂ ಏನನ್ನು ಹೇಳಬೇಕು, ಹೇಳಬಾರದು ಎಂಬುದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಂತೆ. ಹೀಗಾಗಿ ಅಂಥವರು ಮನಸ್ಸಿನೊಳಗಿರುವ ಎಲ್ಲವನ್ನೂ ಹೇಳಿದ್ದನ್ನು ಕೇಳಿಸಿಕೊಳ್ಳಲು 45–55 ವರ್ಷ ವಯಸ್ಸಿನ ಪುರುಷರು ಗಂಟೆಗೆ 10 ಡಾಲರ್ ಬಾಡಿಗೆಗೆ ಲಭ್ಯವಂತೆ. ನಮಲ್ಲಿ ಕೂಡಾ ಬಾಡಿಗೆ ಬಾಯಿಗಳು ಭಯಂಕರ ಭಾಷಣ ಮಾಡುವಾಗ ಅದನ್ನು ಕೇಳುವ ಕಿವಿಗಳೂ ಬಾಡಿಗೆಗೆ ಲಭ್ಯ, ಅಲ್ಲವೇ!

ಆರ್ಥಿಕ ಮುಗ್ಗಟ್ಟಿನಿಂದ ತತ್ತರಿಸಿರುವ ಗ್ರೀಸ್ ತೆರಿಗೆಗಳ್ಳರನ್ನು ಪತ್ತೆ ಮಾಡಲು ನಾಯಿಗಳನ್ನು ಬಳಸಿಕೊಳ್ಳಲಿದೆಯಂತೆ. ಯಾರು ಮನೆಯಲ್ಲಿ ಕಪ್ಪುಹಣ ಅಡಗಿಸಿಟ್ಟಿದ್ದಾರೋ ಅವರನ್ನು ನಾಯಿ ಮೂಸಿಕೊಂಡು ಹೋಗಲಿದೆಯಂತೆ. ಕಪ್ಪುಹಣದ ಹಿಂದೆ ಹೋಗುತ್ತಿರುವ ನಮ್ಮ ಸರ್ಕಾರಕ್ಕೂ ಈ ಸಲಹೆ ಕೊಟ್ಟಿದ್ದರೆ ಸ್ವಿಸ್ ಬ್ಯಾಂಕ್‌ಗಳನ್ನು ನೋಡುವ ಅವಕಾಶ ನಾಯಿಗಳಿಗೂ ಸಿಗುತ್ತಿತ್ತು.



ಚೀನಾದಲ್ಲಿ ಇತ್ತೀಚೆಗೆ ಮೆಣಸಿನಕಾಯಿ ತಿನ್ನುವ ಸ್ಪರ್ಧೆ ನಡೆಯಿತು. ಭಾಗವಹಿಸಿದವರ ಮೇಲೆ ನಿರಂತರವಾಗಿ ಮಂಜುಗಡ್ಡೆ ಸುರಿಯಲಾಯಿತು. ಹೊಟ್ಟೆಯೊಳಗಿನ ಖಾರದ ಬಿಸಿ ಕಡಿಮೆ ಮಾಡಲು ತಲೆಯ ಮೇಲೆ ಮಂಜುಗಡ್ಡೆ ಸುರಿದರೆ, ತಲೆ ಬಿಸಿ ಕಡಿಮೆ ಮಾಡಲು ಎಲ್ಲಿ ತಣ್ಣಗೆ ಮಾಡಬೇಕೋ!

ಅಮೆರಿಕದ ಓಹಿಯೋದಲ್ಲಿ ಕಳೆದ ವಾರ ರಿಪಬ್ಲಿಕನ್ನರ ರಾಷ್ಟ್ರೀಯ ಸಮಾವೇಶ ನಡೆಯಿತು. ಅದಕ್ಕಾಗಿ ಛಾಯಾಗ್ರಾಹಕನೊಬ್ಬ ಜೀವಂತ ಕಲೆಯನ್ನು ಭಾಗವಹಿಸಿದವರ ಮುಂದಿಟ್ಟನಂತೆ. 'ಎಲ್ಲವೂ, ಅಂದರೆ ಅವಳು ಹೇಳುವುದರ ಅರ್ಥ ಎಲ್ಲವೂ ' ಎಂದು ಶೀರ್ಷಿಕೆ ಕೊಟ್ಟಿದ್ದನಂತೆ. ಆತ ನೂರಾರು ಮಹಿಳೆಯರು ನಗ್ನರಾಗಿ ಈ ಕಲೆಗೆ ಒಲಿದು ಬರುವಂತೆ ಮಾಡಿದ್ದಕ್ಕೆ ಎಲ್ಲವೂ ಕಾರಣವೋ ಅಥವಾ ಯಾವುದಾದರೂ ಒಂದೇ ಕಾರಣವೋ ಎಂದು ಇತರ ಛಾಯಾಗ್ರಾಹಕರು ತಲೆ ಕೆಡಿಸಿಕೊಂಡಿರಬಹುದು.

